ಮಾಡುವಷ್ಟರಲ್ಲಿ ಅವನ ಎಡಕ್ಕೊಬ್ಬ ಯಮನ ಬಣ್ಣದ ಅದ್ಭುತ ವ್ಯಕ್ತಿ ಕುಂತ. ಹಾಂಹಾಂ ಎಂದು ಚೀರುವಷ್ಟರಲ್ಲಿ ಅವನ ಬಲಕ್ಕೆ ಇನ್ನೊಬ್ಬ ಭಯಂಕರ ನಗಾರಿ ಆಸಾಮಿ ನುಗ್ಗಿ ಬಂದು ಕುಂತ. ಅಯ್ಯಯ್ಯೋ ಅನ್ನೂದ್ರಾಗ ಈ ಟಂಟಂದ ಹೊಟ್ಟೆಯಲ್ಲಿ ನಾಕೆಂಟು ಮರಿಜೋಳುಗಳಂತೆ ಸಾಲಿ ಹುಡಿಗಿಯರು ತೊಡ್ರಾಬಡ್ರಾ ಹೊಕ್ಕೊಂಡು ಕುಂತವು. ಆ ಟಂಟಂ ಗಾಡಿಯ ಎಡಕ್ಕೆ ಬಲಕ್ಕೆ ಹಿಂದೆ ಮೆಟ್ಟಿಲು ಮೇಲೆ ಅನೇಕರು ಒಂಟಿಗಾಲಿನ ಮೇಲೆ ಜೋತುಬಿದ್ದು ನಿಂತರು! ಟಂಟಂ ಕೂಡಲಸಂಗಪ್ಪನ ಜಗ್ಗಲಿಗಿ ಆತು.

ಓ... ಹೊಳೆಸಾಲಿನ ಇವರ ಜೀವನವೇ ಟಂಟಂ ಅನಿಸಿತು! ನನಗೆ ಅಯ್ಯಯ್ಯೋ ಅನ್ನಲೂ ಬರಲಿಲ್ಲ! ಉಸಿರು ಹೊಟ್ಟೆಯಲ್ಲೇ ಸಿಕ್ತು!

ಟಂಟಂ ಗಾಡಿ ಟಂಗುಟ್ಟುತ್ತ ಹೊಂಟೇ ಬಿಡ್ತು! ಈ ಜನರ ಒತ್ತಡದಲ್ಲಿ ನಾನು ಚಪ್ಪರಕಾಯಿ ಚಟ್ನಿ ಆದೆ.

ಆ ದಢೂತಿ ಹೆಂಗಸು ನನ್ನ ಮೇಲೆ ಇನ್ನಿಷ್ಟು ಮಣಕ್ಕೆ ಒತ್ತಿ ಕೇಳಿದಳು... 'ಎಲೆಡಿಕಿ ತಿಂತೀರೇನ್ರಿ ಸಾವ್ಕಾರ್ರೆ?'

ಆಗ ಎಲ್ಲರೂ ಎಲ್ಲರ ಮೇಲೆ ಸಾರಾಸಗಟ್ಟಾಗಿ ಬಿದ್ದು 'ಯಕ್ಕಾ', 'ಯಣ್ಣಾ', 'ಕಾಕಾ', 'ಮಾವಾ', 'ಚಿಗಪ್ಪಾ', 'ಚೋಟ್ಯಾ', 'ಗಿಡ್ಯಾ', 'ಗುರ್ಯಾ', 'ಬುಡ್ಯಾ', 'ಹಲ್ಲಗೂರ್‍ಯಾ...' ಅಂತ ಹುಡುಗಾಟಿಕೆ ಮಾಡತೊಡಗಿದರು. ಎಲ್ಲಾ ಹೆಂಗಸರೂ ಸೇರಿ ಡ್ರಾಯವರನ ಎಡಕ್ಕೆ ಕುಂತವನನ್ನು ಜಜ್ಜತೊಡಗಿದರು. ಅವರ ಆ ಗುದ್ದುವ ಭಾಷೆ ನನಗೆ ಅರ್ಥ ಆಗಲಿಲ್ಲ.

ಆತ ಅವರ ಭಾಷೆ ಅರ್ಥವಾಗಿ ಹಿಂದಿ ಸಿನಿಮಾ ಹಾಡು ಹಾಡತೊಡಗಿದ.

ಎಲ್ಲರೂ ಅವನ ಬೆನ್ನಿಗೆ ದಪದಪನೆ ಗುದ್ದಿ– 'ಲೇ ಸಂಗ್ಯಾ... ಹುಚಮಂಗ್ಯಾ... ಕಾರೇಕಟ್ಟದ್ದ ಹಾಡ ಹಾಡಲಾ...' ಅಂದರು.

ಮತ್ತೇನು ಎಲ್ಲರೂ ಕಾಂಪಿಟೇಶನ್ ಮೇಲೆ ಬಯಲಾಟದ ಪದ, ಹಂತಿಹಾಡು, ಸೋಬಾನ ಪದ, ಮಾವನ ಮನೆಯ ಹಾಡು, ತವರಮನಿ ತ್ರಿಪದಿ, ಗೌರಿ– ಶೀಗಿ ಕೋಲಾಟ ಕುಣಿತದ ಹಾಡು ಹಾಡತೊಡಗಿದರು. ನಾನು ಮನ್ನೆ ಬೆಂಗ್ಳೂರಿನಿಂದ ಅಮೇರಿಕೆಯ ಸ್ಯಾನ್‌ಫ್ರಾನ್ಸಿಸ್ಕೋ ನಗರಕ್ಕೆ ಸತತ 22 ಗಂಟೆ ಆಕಾಶದಲ್ಲಿ ಹಾರಿದರೂ ವಿಮಾನದಲ್ಲಿ ನನ್ನ ಮಗ್ಗಲು ಕುಂತ ಭೂಪ ನನ್ನ ಕೂಡ ಒಮ್ಮೆಯೂ ಮಾತಾಡಲಿಲ್ಲ. ಆ ವಿಮಾನ... ಅದು ಆಕಾಶದ ನರಕ! ಈ ಟಂಟಂ... ಇದು ಭೂಲೋಕದ ಸ್ವರ್ಗ!

ಇಲ್ಲಿ ಇವರು ಯಾರೊ ಏನೋ... ಎಲ್ಲರೂ ಎಲ್ಲರೊಂದಿಗೆ ತಳಕು– ಬಳಕು–ಮಲಕು ಬಿದ್ದು ಹಾಡಿದರು, ಹೊಳ್ಯಾಡಿದರು, ಚಿಟಗು ಮುಳ್ಳಾಡಿಸಿದರು. ಚೂಟಿದರು. ತಿವಿದರು. ಟಂಟಂ ಅವರಿಗೆಲ್ಲ ಟೂರಿಂಗ್ ಟಾಕೀಜ ಆತು! ಮಗ್ಗುಲಿನ ಹಂಡೆ ಗಾತ್ರದ ಹೆಂಗಸಿನ ತೊಡೆ ಮೇಲೆ ಕುಂತ ಗಿಂಡಿ ಹೆಣ್ಣು ಎಲ್ಲರಿಗೂ ತಿನ್ನಲು ರಸದುಂಬಿದ ಕಡ್ಲಿಗಿಡ ಕೊಟ್ಟಳು. ನನಗೂ ಎರಡು ಗಿಡ ಕೊಡಬಂದಳು.

ನಾನು... 'ಅಯ್ಯಯ್ಯೋ.... ನನ್ನ ಕೈ ನಿನ್ನ ತೊಡಿ ಸಂದ್ಯಾಗ ಸಿಕ್ಕಾವಬೇ.... ಹ್ಯಾಂಗ ತಿನ್ಲಿ?' ಅಂದೆ. ಆಗ ಆ ಹೆಂಗಸು ತಾನೇ ಕಡ್ಲಿಬುಡ್ಡಿ ಸುಳುಸುಳು ಸುಲಿದು ನನ್ನ ಬಾಯಿಗೆ ಇಟ್ಟು .... 'ತಿನ್ನೆಪ್ಪಾ.... ನೀ ನನ್ನ ಹಡದಪ್ಪಾ.... ತಿನ್ನು ತಿನ್ನು...' ಅಂದಳು. ನಾ ಪಡದಪ್ಪಾ ಆಗಿ ಮುಟುಮುಟು ರಸ ತುಂಬಿದ ಕಡ್ಲಿಕಾಳು ತಿಂದೆ.

ಕೂಡಲಸಂಗಮ ಬಂದಾಗ ಅಕ್ಷರಶಃ ಆ ಹೆಂಗಸರು ನನ್ನ ರಟ್ಟೆಯಲ್ಲಿ ಕೈ ಹಾಕಿ ಜಗ್ಗಿ ಹೊರಕ್ಕೆ ತೆಗೆದರು. ಅವರ ಸಂದಿಯಲ್ಲಿ ಸಿಕ್ಕು ನೆಗ್ಗಿದ ತಾಬಂಡಿ ಆಗಿತ್ತು ನನ್ನ ಮೈಯಿ!

ಕೆಳಗೆ ಇಳಿಸಿದಾಗ ನನ್ನ ಹೊಟ್ಟೆ ಹಸ್ತು ಹಾವ್ರಾಣಿ ಆಗಿತ್ತು. ಆಗ ಪಕ್ಕದ ಹಳ್ಳಿಯ ಹರಕು ಪರಕಾರದ ಕಂಚೀಹಣ್ಣಿನ ಬಣ್ಣದ ಹುಡಿಗಿಯರು ಬಿದಿರ ಬುಟ್ಟಿಯ ತುಂಬ ಮಸರ ಗಡಿಗಿಗಳನ್ನು ನನ್ನ ಮುಂದೆ ಚಾಚಿದರು.

'ಇದೇನಬೇ?' ಅಂದೆ. ಅದೇ ಟಂಟಂ ಹೆಂಗಸು ಹೇಳಿದಳು – 'ಇದು ಮಸರ ಗಡಿಗಿರೀ ಶಿವಾ. ಹಸದ ಬಂದೀರಿ. ತಿನ್ರಿ... ತಿನ್ರಿ...'

ಐದ ರೂಪಾಯ್ಕ ಒಂದು ಚಟಿಗಿ ತುಂಬ ಪಕ್ಕಾಪಕ್ಕಾ ಹೆಡಸೆಮ್ಮಿಯ ಕೆನಿಮಸರು! ಅದರಲ್ಲಿ ಒಂದು ಮುಟಿಗಿ ಸಕ್ಕರಿ ಸುರುವಿ, ಕಡ್ಡೀಲಿಂದ ಕಡ್ಯಾಡಿಸಿ ಕೊಟ್ಟಳು. ಅಬ್ಬಬ್ಬಾ ಎಂಥಾ ರುಚಿ! ಈ ಮಸರ ಗಡಗಿ ಮುಂದೆ ಆ ನಮ್ಮ ಬೆಂಗ್ಳೂರು ತಂಗಳ ಇಡ್ಲಿ ಆತು. ಚಪ್ಪರಿಸಿ ತಿಂದೆ. ಅದೇ ಕೆಕ್ರ ಹಣ್ಣಿನ ಹುರುಬರಕು ಹೆಂಗಸು ನನಗೆ ಹೇಳಿದಳು, 'ಕೂಡಲ ಸಂಗಪ್ಪಂದ್ರ ಮಸರಗಡಿಗಿರೀ ಯಪ್ಪಾ.. ಭೇಸೆಂಗ ತಿನ್ರಿ...'

ಅವಳ ಮಾತು ಬೆಂಗಳೂರಿನವರ ಪಾಶ್ ಪಾಲಿಸಿ ಬಿಜಿನೆಸ್ ಭಾಷೆ ಆಗಿರಲಿಲ್ಲ. ಅದು ಖರೇ ಹಕೀಕತ್ತು ಆಗಿತ್ತು. ಮತ್ತೊಂದು ಚಟಿಗಿ ಮಸರು ಕೊಂಡೆ. ಮತ್ತೊಂದು ಮುಟಿಗಿ ಸಕ್ರಿ ಹಾಕಿದಳು ಹುಡಿಗಿ. ಅವಳ ಇಟ್ಟಿಡ್ಡಾಲ ಹರಕು ಪರಕಾರದಲ್ಲಿ ಎಲ್ಲಾ ಎಲ್ಲಾ ಚಂದಾಗಿ ಕಾಣತಿದ್ದು. ಅವಳ ಸಹಜ ಬದುಕಿನ ಭಾಷೆ ಆಗಿದ್ದಳು.

ಮಸರಗಡಿಗಿ ಚಪ್ಪರಿಸುತ್ತ ಕೃಷ್ಣಾ–ಮಲಪ್ರಭೆಯರ ಗೆಳತಿಯರ ತೋಳ ತೆಕ್ಕೆಯಲ್ಲಿ ತೇಲಿ ಹೋದೆ. ಇಲ್ಲಿ ಹೆಬ್ಬಯಲ ಬಯಲು, ಶುದ್ಧ ನೀರು, ಪರಿಶುದ್ಧ ಗಾಳಿ ಹೊರತು ಮನುಷ್ಯ ಲೋಕದ ಕಲಸು ಮಲಸು ಇನ್ನೇನು ಇಲ್ಲ. ಝುಲ್ಲಬಿಟ್ಟು ಹೊಳೆಸ್ನಾನಾ, ಕೂಡಲಸಂಗಪ್ಪನ ದರ್ಶನ, ಕೂಡಲಮುಖಿ ಪಾತಾಳಲಿಂಗದ ದರ್ಶನ, ಡೋಣಿ ವಿಹಾರ ಎಲ್ಲಾ ಮುಗಿಸಿ, ನೇರವಾಗಿ ಟೆಂಟ ಹೋಟೇಲ ಕಡೆಗೆ ಕೂಳು ಬಕ್ಕರಿಸಲು ಹೊಂಟೆ.

ನನ್ನನ್ನು ನೋಡಿದ ಆ ಟಂಟಂ ಗಾಡಿಯ ಕುಂಬಳಬಳ್ಳಿಯ ಹೆಂಗಸು ನನಗೆ... 'ಅಲ್ಲ್ಯಾಕ ಹೋಗ್ತೀರಿ ಶಿವಾ... ಇಲ್ಲೆ ಬರ್‍ರಿ. ನಾ ಕರಕೊಂಡ ಹೋಗ್ತೇನಿ ಬರ್‍ರಿ... ಅಂದಳು.

ನಮ್ಮ ಮುದ್ದಿನ ಬೆಂಗ್ಳೂರಲ್ಲಿ ಯಾರೇ ಪ್ರೀತಿಯಿಂದ ಮಾತಾಡಿಸಿದರೂ ಅಲ್ಲಿ ಒಂದು ಟಿಪ್ಪಿಗಿಯ ಖಾತೆ ಗ್ಯಾರಂಟಿ! ನಾನು ಅಂಜುತ್ತ ಅವಳ ಹಿಂದೆ ನದಿದಂಡೆಯ ಗಂಗಿ ಮಂಟಪಕ್ಕೆ ಹೋದೆ. ಅಲ್ಲಿ ಒಂದು ಕೂಸಿನ ಜವುಳ ಇಟ್ಟಿದ್ದರು. ನಾವೆಲ್ಲ ಪುಕ್ಕಟೆ ಆಮಂತ್ರಿತರಾಗಿ ಬುತ್ತಿ ಊಟಕ್ಕೆ ಹಸದ ಹಾವ್ರಾಣಿ ಆಗಿ ಕುಂತೆವು. ಪೈಪಾವಾಣಿ ದುಡ್ಡು–ಕಾಸು ಕೊಡಬೇಕಾಗಿಲ್ಲ. ಪುಕ್ಕಟೆ ಆಶೀರ್ವಾದ ಕೊಟ್ಟರೆ ಆತು.

ಆ ಕೂಸಿನ ತಾಯಿ ನಮ್ಮ ಮುಂದೆ ತನ್ನ ಎಳೇಕೂಸು ಮಣ್ಣನೆಲದಲ್ಲಿ ಮಲಗಿಸಿ ನಮಗೆ ಸಾಸ್ಟಾಂಗ ಹಾಕಿದಳು.

ನಾನು ಬೆಂಗ್ಳೂರ ಶೈಲಿಯಲ್ಲಿ.... 'ನೋನೋ.... ಇದು ಮಣ್ಣು... ಈ ಬೇಬಿ ಹಿಂಗ ಮಣ್ಣಾಗ ಹಾಕಬಾರ್ದು...' ಅಂದೆ.

ಆ ತಾಯಿ ಹೇಳಿದಳು– 'ಯಪ್ಪಾರೆ... ಮಣ್ಣಾಗ ಹುಟ್ಟೇತ್ರಿ ಈ ಜೀವಾ.... ಮಣ್ಣಾಗ ಬೆಳದೈತ್ರಿ.... ಮಣ್ಣಿನ ಸುಖಾ ಪಾರೋದ್ದೇವಿಗೂ ಇಲ್ರಿ ತಂದೆ'......!

ಅವಳ ಕೂಸಿನ ಹುರಕ್ಕಿ ಹೋಳಿಗಿಯ ಗಲ್ಲ ನೋಡುತ್ತಲೇ... ಮಾದ್ಲಿ – ಬಿಚಗಡಬು–ಬೆಲ್ಲದಬ್ಯಾಳಿ... ಅದರ ಮ್ಯಾಗ ಸಜ್ಜಿರೊಟ್ಟಿ–ಯಣಗಾಯಿ– ಮಡಕಿ ಉಸುಳಿ– ಅಗಸಿ ಹಿಂಡಿ–ಬಳ್ಳೊಳ್ಳಿ ಚಟ್ನಿ–ಕರಿಂಡಿ–ಅಲಸಂದಿ ಹಪ್ಪ– ಉಪ್ಪಿನಕಾಯಿ–ಮತ್ತಮ್ಯಾಲೆ ಮಸರ ಬುತ್ತಿ ಗುರೆಳ್ಳ ಹಿಂಡಿ– ಕಾಯ ಸ್ಯಾಂಡಿಗಿ... ಕುಂತ ಮೆಟ್ಟಿನ ಮ್ಯಾಗ ಹೊಳೆಸಾಲಿನ ಬುತ್ತೀ ಊಟ ಖೂಬಾಗಿ ಕತ್ರಿಸಿ ಉಂಡೆ! ಆ ಊಟದ ಮುಂದೆ ಫೈವ್ ಸ್ಟಾರ ಊಟ ಹುಳುಕು ಹುಂಚಿ ಹಣ್ಣು ಅನಿಸಿತು.

ನಾನು ನನ್ನ ಪ್ಯಾಟಿ ಭಾಷೆಯಲ್ಲಿ ಆ ತಾಯಿಗೆ ಕೇಳಿದೆ–

'ಈ ಊಟಕ್ಕ ಏನ ಕೊಡಬೇಕಬೇ ನಾನು?'

ಅವಳೆಂದಳು– 'ಈ ಕೂಸೀಗೆ ನಿಮ್ಮ ಆಶೀರ್ವಾದಕ್ಕಿನ್ನಾ ಏನ ಜಾಸ್ತೀ ಐತ್ರಿ ಶಿವಾ? ಚಂದಾಗಿ ಆಶೀರ್ವಾದಾ ಮಾಡ್ರೀ ನನ್ನ ಕಂದವ್ವಗ.. ಭೇಟ ನಿಮ್ಮಂತಾಗ್ಲಿರೀ ತಂದೆ....'

ಸಂಜೆ ಹೊಳ್ಳಿ ಹೋಗುವಾಗ ಅದೇ ಟಂಟಂ ಗಾಡಿಗೆ ಕೂಗಿದೆ–

'ಟಂಟಂ... ಏ ಟಂಟಂ...!'

ಟಂಟಂ ಬರಲಿಲ್ಲ! ಧುಮಿಕ್ಯಾ ಬಸ್ಸು ಬಂತು!....

ಬಸ್ಸಿನಲ್ಲಿ ಕುಂತಾಗ ಬೆಂಗ್ಳೂರಿನ ತಂಗಳ ದೋಸಿ ತಿಂದಷ್ಟು ದುಃಖ ಆತು! ಮಸರು ಗಡಿಗಿಯ ಹುಡಿಗಿಯರು, ಅಳ್ಳೊಳ್ಳಿ ಬಾಬಾ ವೇಷಗಾರರು, ಆ ಸೋತ ಮುದಿಕಿಯರು, ಗಂಟಿ ಜಂಗಮರು, ಹೆಗಲ ಕೂಸು ಹೊತ್ತ ಹೆಂಗಸರು, ಹರಕು ಪರಕಾರದ ಚಲುವಿಯರು ಎಲ್ಲರೂ ನನ್ನನ್ನು ಹಸಿದ ಕಣ್ಣುಗಳಿಂದ ನೋಡಿದರು. ಅವರ ಕಣ್ಣಲ್ಲಿ ನೂರು ಕತೆ, ಸಾವಿರ ಚರಿತ್ರೆಗಳು ಮೌನಗೀತೆ ಹಾಡುತ್ತಿದ್ದವು.

ಬಸ್ಸು ನಿರ್ಜೀವ ಯಂತ್ರವಾಗಿ ಓಡತೊಡಗಿತು. ಆಕಾಶದ ವಿಮಾನಕ್ಕಿಂತ ಭೂಲೋಕದ ಟಂಟಂ ಗಾಡಿಯ ಸುಖವೇ ಮೇಲು... ಅನ್ನುತ್ತಿದ್ದಂತೆ ಕೃಷ್ಣಾತೀರದ ಮಸರಬುತ್ತಿಯ ತಂಪು ನಿದ್ದೆ ನನ್ನನ್ನು ತಬ್ಬಿತು.

ಕನಸಿನ ತುಂಬ ಆ ಹುಡಿಗಿಯ ಜೋಗುಳ ಹಾಡು ಕೇಳುತ್ತಿತ್ತು! ಹೊಳೆದಂಡೆಯ ಬುತ್ತಿ ಊಟದ ಸುಖ ತೊಟ್ಟಿಲು ತೂಗುತ್ತಿತ್ತು! ಕೂಡಲಸಂಗಪ್ಪ ಕುಲುಕುಲು ನಗುತ್ತಿದ್ದ.